
# ಪರಾಭಕ್ತಿಯ ಮಹಿಮೆ

ನಾವೆಲ್ಲರೂ ಒಬ್ಬನೇ ಆದ ಭಗವಂತನ ಸಂತಾನಕ್ಕೆ ಸೇರಿದವರಾಗಿದ್ದೇವೆ. ನಮ್ಮನ್ನು ಯಾವುದೇ ಮತವು ನಿರ್ಬಂಧಿಸಿ ಕಟ್ಟಿಹಾಕಲಾರದು. ಹಾಗೆ ನೋಡಿದರೆ ನಾವು ಅನುಸರಿಸಿಯೇ ತೀರಬೇಕೆಂಬ ಕ್ರಿಯಾವಿಧಿಗಳು ಕೂಡ ಯಾವುವೂ ಇಲ್ಲ. ನಾವು ಯಾರನ್ನು ಪೂಜಿಸುತ್ತೇವೆ, ಯಾರನ್ನು ಪ್ರಾರ್ಥಿಸುತ್ತೇವೆ ಎಂದು ಕೇಳಿದರೆ ನಮ್ಮೊಳಗೇ ವಾಸಮಾಡುತ್ತಿರುವ ಪರಮಾತ್ಮನನ್ನೇ ಪೂಜಿಸುತ್ತೇವೆ, ಅವನನ್ನೇ ಪ್ರಾರ್ಥಿಸುತ್ತೇವೆ. ಆ ಪರಮಾತ್ಮನೇ ನಮಗೆ ಬೋಧಕನೂ ಮಾರ್ಗದರ್ಶಕನೂ ಆಗಿದ್ದಾನೆ. ದೇವಾಲಯಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ದೇವಾಲಯವಾದ ಮಾನವನ ಆತ್ಮದಲ್ಲಿಯೇ ಆ ಪರಮಾತ್ಮನು ವಾಸಮಾಡುತ್ತಾನೆ. ಆ ಪರಮಾತ್ಮನನ್ನು ಪೂಜಿಸುವುದಕ್ಕಾಗಲಿ, ಪ್ರಾರ್ಥಿಸುವುದಕ್ಕಾಗಲಿ ಅನನ್ಯವಾದ ಏಕಾಗ್ರತೆ ಬೇಕು, **'ನೀನೇ ನನಗೆ ಬೇಕು'** ಎಂಬ ನಿಶ್ಚಯವು ಬೇಕು.




ಉದ್ಯಾನವನವೊಂದರಲ್ಲಿ ರಹೀಮ ಎಂಬಾತನು ಆರಾಮವಾಗಿ ಕುಳಿತುಕೊಂಡಿದ್ದನು. ನಮಾಜು ಮಾಡುವ ಹೊತ್ತು ಬಂದೊಡನೆ ತಾನು ಇದ್ದಲ್ಲಿಯೇ ನೆಲದ ಮೇಲೆ ವಸ್ತ್ರವೊಂದನ್ನು ಹಾಸಿಕೊಂಡು ಅವನು ಪ್ರಾರ್ಥನಾನಿರತನಾಗಿಬಿಟ್ಟನು. ನಮಾಜು ಮಾಡುವುದೆಂದರೆ ಮಂಡಿಯೂರಿ ಕುಳಿತುಕೊಳ್ಳುವುದು, ಬಾಗುವುದು, ಮೇಲೇಳುವುದು; ಮುಖವಡಿಯಾಗಿ ಮಲಗುವುದು, ಮೇಲೇಳುವುದು, ಮುಂತಾದ ಕ್ರಿಯಾಕಲಾಪಗಳಿರುತ್ತವೆ. ರಹೀಮನು ಅವುಗಳನ್ನೆಲ್ಲ ನಿಗದಿಯಾದಂತೆ ಮಾಡುತ್ತಿದ್ದನು.

ಆ ಹೊತ್ತಿಗೆ ಸರಿಯಾಗಿ ಪ್ರೇಮವಿಹ್ವಲಳಾದ ಯುವತಿಯೊಬ್ಬಳು ಆ ಉದ್ಯಾನವನವನ್ನು ಪ್ರವೇಶಿಸಿದಳು. "ನಾನು ಸಂಜೆ ಆರುಗಂಟೆಯ ಹೊತ್ತಿಗೆ ಆ ಉದ್ಯಾನವನಕ್ಕೆ ಬಂದಿರುತ್ತೇನೆ, ನೀನೂ ಅಲ್ಲಿಗೆ ಬಾ" ಎಂದು ಅವಳ ಪ್ರಿಯತಮನು ಈ ಮೊದಲೇ ಅವಳಿಗೆ ತಿಳಿಸಿದ್ದನು. ಅವಳು ಬರುತ್ತಿದ್ದಂತೆಯೇ ಅಲ್ಲಿಯೇ ಸ್ವಲ್ಪ ದೂರದಲ್ಲಿ ತನ್ನ ಪ್ರಿಯತಮನು ಮೊದಲೇ ಬಂದು ತನಗಾಗಿ ಕಾಯುತ್ತಿರುವುದು ಕಾಣಿಸಿತು. ಆತುರದಿಂದ ಅವಳು ದಿಕ್ಕುದಿಸೆಗಳನ್ನು ನೋಡದೆ ಅವನತ್ತ ನುಗ್ಗಿ ನಡೆದಳು. ಆ ದಾರಿಯಲ್ಲಿಯೇ ರಹೀಮನು ತನ್ನ ನಮಾಜಿನ ಅಂಗವಾಗಿ ನೆಲದಮೇಲೆ ಉದ್ದಂಡ ಮಲಗಿಬಿಟ್ಟಿದ್ದನು. ಅವನ ಮೇಲೆಯೇ ಹೆಜ್ಜೆಯಿಟ್ಟು ಆ ಯುವತಿ ನಡೆದುಬಿಟ್ಟಳು. ಮತಾವೇಶಭರಿತನೂ ಮುಂಗೋಪಿಯೂ ಆಗಿದ್ದ ರಹೀಮನಿಗೆ ಆ ಯುವತಿಯ ವರ್ತನೆಯಿಂದ ಅತ್ಯಂತ ಭಯಂಕರವಾದ ಸಿಟ್ಟು ಉಕ್ಕಿಬಂದಿತು. ಆಕೆಯನ್ನು ಕೊಂದೇಬಿಡುತ್ತಾನೇನೋ ಎನ್ನುವಷ್ಟು ಕ್ರೋಧದಿಂದ "ನಿಲ್ಲುನಿಲ್ಲು ಅಯೋಗ್ಯಳೇ, ನಿನಗೇನು ಕಣ್ಣು ಕಾಣುವುದಿಲ್ಲವೇ" ಎಂದು ಅಬ್ಬರಿಸುತ್ತ ಅವಳತ್ತ ನುಗ್ಗಿದನು.

ಅತ್ಯಂತ ಚುರುಕು ಸ್ವಭಾವದ ಆ ಯುವತಿಯು "ಸಾಕು ನಿಲ್ಲಿಸು, ದುಡುಕಬೇಡ, ನೀನೊಬ್ಬ ಮೂರ್ಖ, ಕಪಟಿ, ನಿನಗೊಂದು ಮಾತು ಹೇಳುವುದಿದೆ" ಎಂದು ಬಿರುಸಿನಿಂದ ನುಡಿದಳು. ಅದಕ್ಕೆ ರಹೀಮನು "ಏನೆಂದೆ ನೀಚಳೇ, ನಮಾಜು ಮಾಡುತ್ತಿರುವ ನಾನೇ ಮೂರ್ಖನೇ, ನಾನೇ ಕಪಟಿಯೇ, ನನಗೇ ಉಪದೇಶ ಹೇಳಲು ಬರುತ್ತೀಯಾ" ಎಂದು ಗರ್ಜಿಸಿದನು. ಆಗ ಆ ಯುವತಿಯು "ನಾನು ಈ ಲೋಕದ ಪ್ರಿಯತಮನಿಗೆ ಮರುಳಾಗಿ ಅವನನ್ನು ಕಾಣಲು ಇಲ್ಲಿಗೆ ಬಂದಿದ್ದೇನೆ. ನನ್ನ ಈ ಪ್ರೇಮದ ಭರದಲ್ಲಿ ನೀನು ನನ್ನ ಕಣ್ಣಿಗೆ ಬೀಳಲೇ ಇಲ್ಲ. ನನಗೇ ಹೀಗಾದರೆ ನಿನಗೆ ಹೇಗಾಗಬೇಡ! ನೀನು ಸ್ವರ್ಗೀಯ ಪ್ರಿಯತಮನನ್ನು ಸಂಧಿಸಲೆಂದು ಅವನ ಪ್ರಾರ್ಥನೆಯಲ್ಲಿ ತೊಡಗಿದ್ದೀಯಲ್ಲವೇ! ಇಹಲೋಕದ ಪ್ರಿಯತಮನನ್ನು ಕಾಣಲು ಹೊರಟ ನನಗೆ ನೀನು ಹೇಗೆ ಕಾಣಿಸಲಿಲ್ಲವೋ ಹಾಗೆಯೇ ಸ್ವರ್ಗಲೋಕದ ಪ್ರಿಯತಮ ಪರಮಾತ್ಮನನ್ನು ಕಾಣಲು ಹಂಬಲಿಸುತ್ತಿರುವ ನಿನಗೆ, ನಾನು ನಿನ್ನ ಮೇಲೆ ನಡೆದುಬಂದುದು ತಿಳಿಯಲೇಬಾರದಿತ್ತು. ಆಗ ಮಾತ್ರವೇ ನಿನ್ನ ಪ್ರಾರ್ಥನೆಗೆ ಸಾರ್ಥಕತೆಯಿರುತ್ತಿತ್ತು" ಎಂದು ದಿಟ್ಟತನದಿಂದ ನುಡಿದಳು.

ಆಕೆಯ ಮಾತುಗಳನ್ನು ಕೇಳುತ್ತಿದ್ದಂತೆಯೇ ರಹೀಮನ ಕೋಪ ಕೊಂಚ ತಣ್ಣಗಾಯಿತು. "ಹೌದು, ಈಕೆ ಹೇಳುವುದರಲ್ಲಿಯೂ ಸತ್ಯವಿದೆ" ಎಂದು ತನಗೆ ತಾನೇ ಹೇಳಿಕೊಳ್ಳುತ್ತ, ಅವಳ ಮೇಲೆ ಕೈಮಾಡದೆ ಹಿಂದಕ್ಕೆ ಸರಿದುಬಿಟ್ಟನು.

ಆ ಯುವತಿ ಹೇಳಿದ ಮಾತು ಪರಾಭಕ್ತಿಯ ಸ್ಥಿತಿ. ಅದೇ ನಾವೆಲ್ಲರೂ ಪಡೆಯಬೇಕಾದ ಸ್ಥಿತಿ. ಆಗ ಗ್ರಂಥಗಳು, ಮತಗಳು, ಕ್ರಿಯಾವಿಧಾನಗಳು ಎಂಬುವೆಲ್ಲವೂ ಅದೃಶ್ಯವಾಗಿ, ಅನಂತವಾದ ಆತ್ಮವು ಮಾತ್ರ ತಾನೇ ತಾನಾಗಿ ಉಳಿದುಬಿಡುತ್ತದೆ. ಆ ಸ್ಥಿತಿಯಲ್ಲಿ 'ಇದು ನನ್ನ ತಂದೆಯ ಧರ್ಮ', 'ಇದು ನನ್ನ ದೇಶದ ಧರ್ಮ', 'ಇದು ನನ್ನ ಧರ್ಮದ ಗ್ರಂಥ' ಎಂಬ ತಲೆತಲಾಂತರದಿಂದ ಬಂದ ಮೂಢನಂಬಿಕೆಗಳೆಲ್ಲ ಮಾಯವಾಗಿ ಬಿಡುತ್ತವೆ. ಆಗ ಒಂದು ಮುಳ್ಳಿನಿಂದ ಮತ್ತೊಂದು ಮುಳ್ಳನ್ನು ತೆಗೆದಂತೆ ಎಲ್ಲವೂ ಹಗುರವಾಗಿಬಿಡುತ್ತದೆ.



ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಶ್ರದ್ಧೆಯನ್ನು ಹೆಚ್ಚಾಗಿ ಎತ್ತಿಹಿಡಿಯುತ್ತಾರೆ. ಉಪನಿಷತ್ತುಗಳ ಮೌಲ್ಯವಾದ ಶ್ರದ್ಧೆಯನ್ನು ಆಧುನಿಕ ಕಾಲಕ್ಕೆ ತಕ್ಕಹಾಗೆ ಅವರು ಉಪದೇಶಿಸಿದ್ದಾರೆ. ಅದರಲ್ಲೂ ವಿದ್ಯಾರ್ಥಿಗಳಿಗೆ ಶ್ರದ್ಧೆ ದೊರಕಿಸಿಕೊಡುವ ಸಕಾರಾತ್ಮಕ ಮನೋಭೂಮಿಕೆ ಅತ್ಯವಶ್ಯವಾದುದು. ಇದನ್ನು ಸ್ವಾರಸ್ಯಕರವಾಗಿ ಪ್ರತಿಪಾದಿಸಿರುವ ಲೇಖಕರು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರು. ಈಗ ಅವರು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಕಟಣ ವಿಭಾಗದ ಗೌರವನಿರ್ದೇಶಕರಾಗಿದ್ದಾರೆ.

ವಿದ್ಯಾರ್ಥಿಪ್ರಭ

# ಶ್ರದ್ಧೆ – ಶಕ್ತಿಯ ಮೂಲ

ಡಾ. ಡಿ.ಕೆ. ರಾಜೇಂದ್ರ

ಶ್ರದ್ಧೆ ಎಲ್ಲ ಕೆಲಸಕಾರ್ಯಗಳ ಕೇಂದ್ರಬಿಂದು. ಅದೇ ಯಶಸ್ಸಿನ ಕೀಲಿಕೈ. ಅದೇ ಯಶಸ್ಸಿನ ಗುಟ್ಟು ಕೂಡ, ಜೀವನದಲ್ಲಿ ಶ್ರದ್ಧೆಯನ್ನು ಕಳೆದುಕೊಂಡ ಯಾವೊಬ್ಬ ವ್ಯಕ್ತಿಯೂ ಏನನ್ನೂ ಸಾಧಿಸಲಾರ. ಗೆಲುವಿನ ಹತ್ತಿರವೂ ಸುಳಿಯಲಾರ. ಏಕೆಂದರೆ, ಶ್ರದ್ಧೆಯೇ ಶಕ್ತಿಯ ಮೂಲ. ಅದು ಆತ್ಮವಿಶ್ವಾಸದ ಪ್ರತೀಕ, ಗೆಲುವಿನ ಸಂಕೇತ. ಇದನ್ನು ಕುರಿತು ಸ್ವಾಮಿ ವಿವೇಕಾನಂದರು ಒಂದು ಕಡೆ ಹೀಗೆ ಹೇಳುತ್ತಾರೆ:

"ಮಾನವನ ಇತಿಹಾಸವೆಂದರೆ, ತಮ್ಮಲ್ಲಿ ಶ್ರದ್ಧೆಯುಳ್ಳ ಕೆಲವೇ ಕೆಲವು ಜನರ ಇತಿಹಾಸವಾಗಿದೆ. ಆ ಶ್ರದ್ಧೆಯು ಒಳಗಿರುವ ದಿವ್ಯತೆಯನ್ನು ಕೂಗಿ ಕರೆಯುವುದು. ನೀನು ಏನನ್ನು ಬೇಕಾದರೂ ಸಾಧಿಸಬಲ್ಲೆ. ನಿನ್ನಲ್ಲಿರುವ ಅನಂತ ಶಕ್ತಿಯನ್ನು ಪ್ರಕಟಗೊಳಿಸಲು ಸಾಕಷ್ಟು ಪ್ರಯತ್ನ ಮಾಡದಿದ್ದರೆ ಮಾತ್ರ ನೀನು ವಿಫಲನಾಗುವೆ. ಒಬ್ಬ ಮನುಷ್ಯನು ತನ್ನ ಶ್ರದ್ಧೆಯನ್ನು ಕಳೆದುಕೊಂಡಾಗಲೇ ಮರಣ ಪ್ರಾಪ್ತವಾಗುವುದು."

ಶ್ರದ್ಧೆ ಜೀವಂತಿಕೆಯ ಲಕ್ಷಣ, ಚಟುವಟಿಕೆಯ ಲಕ್ಷಣ. ಬದುಕಿನಲ್ಲಿ ಶ್ರದ್ಧೆಯನ್ನು ಕಳೆದುಕೊಂಡ ವ್ಯಕ್ತಿ ಜೀವಂತ ಶವವಾಗುತ್ತಾನೆ. ನಿರುತ್ಸಾಹಿಯಾಗಿ ಕೆಲಸಕ್ಕೆ ಬಾರದವನಾಗುತ್ತಾನೆ. ಶ್ರದ್ಧೆ ಉತ್ಸಾಹಿಯ ಒಂದು ಲಕ್ಷಣ ಕೂಡ. ಜೀವನೋತ್ಸಾಹ ಶ್ರದ್ಧೆಯಿಂದ ಮೂಡುವಂತಹದು. ಅವೆರಡೂ ಪರಸ್ಪರ ಪೂರಕ, ಪ್ರೇರಕ. ಯಾವುದೇ ಒಂದು ಕೆಲಸದಲ್ಲಿ ನಾವು ಉತ್ಸಾಹವನ್ನು ತೋರಿದಾಗ ಅದರ ಹಿಂದೆ ಒಂದು ಶಕ್ತಿಯಾಗಿ ಶ್ರದ್ಧೆ ಕೆಲಸ ಮಾಡುತ್ತಿರುತ್ತದೆ. ಗೆಲುವಿಗೆ ದಾರಿ ಮಾಡಿಕೊಡಲು ಕಾರಣವಾಗುತ್ತದೆ. ಶ್ರದ್ಧೆಯಿಂದ ಮಾಡುವ ಯಾವುದೇ ಕೆಲಸ ಫಲ ನೀಡುತ್ತದೆ. ಇದರಲ್ಲಿ ಸಂಶಯವಿಲ್ಲ. "ಶ್ರದ್ಧೆ, ಶ್ರದ್ಧೆ, ನಮ್ಮಲ್ಲಿ ಶ್ರದ್ಧೆ, ಭಗವಂತನಲ್ಲಿ ಶ್ರದ್ಧೆ – ಇದೇ ಮಹಾನತೆಯ ರಹಸ್ಯ" – ಇದು ವಿವೇಕಾನಂದರ ಕಿವಿಮಾತು. ಇದೇ ಗೆಲುವಿನ ಸೂತ್ರದ ದಿವ್ಯರಹಸ್ಯ. ಸ್ವಾಮೀಜಿ ಶ್ರದ್ಧೆಯನ್ನು ಒಂದು 'ಶಕ್ತಿ'ಯಾಗಿ ಕರೆದದ್ದು ಈ ಕಾರಣದಿಂದಲೇ. ನಮ್ಮ ಸೋಲಿಗೆ ಪ್ರಮುಖ ಕಾರಣ, ನಾವು ಮಾಡುವ ಕೆಲಸದಲ್ಲಿ ಶ್ರದ್ಧೆಯಿಲ್ಲದಿರುವುದು, ಆಸಕ್ತಿ ಇಲ್ಲದಿರುವುದು, ಪ್ರೀತಿ ಇಲ್ಲದಿರುವುದು. **ಆಸಕ್ತಿ, ಪ್ರೀತಿ, ಮನಸ್ಸು, ಶ್ರದ್ಧೆ – ಈ ನಾಲ್ಕೂ ಕೂಡಿದಾಗ ಅದೊಂದು ಪ್ರಬಲ ಶಕ್ತಿಯಾಗಿ ಪರಿಣಮಿಸುವುದರಲ್ಲಿ ಅನುಮಾನವಿಲ್ಲ.** ಇಲ್ಲವಾದರೆ, "ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ..." ಎಂಬಂತಾಗುತ್ತದೆ.

ಇಚ್ಛಾಶಕ್ತಿ ಶ್ರದ್ಧೆಗೆ ಕಾರಣವಾಗುತ್ತದೆ, ಮೂಲ ಪ್ರೇರಕಶಕ್ತಿಯಾಗುತ್ತದೆ. ಇಚ್ಛಾಶಕ್ತಿ ಮನಸ್ಸಿನ ದೃಢತೆಯಿಂದ ಸಾಧ್ಯವಾಗುವಂಥದ್ದು. ಆದ್ದರಿಂದ ಮೊದಲು ಮನಸ್ಸನ್ನು ಗಟ್ಟಿಗೊಳಿಸಿಕೊಳ್ಳಬೇಕು, ಶಕ್ತಿಯುತವಾಗಿಸಿಕೊಳ್ಳಬೇಕು. 'ಮನಸ್ಸಿದ್ದೆಡೆ ಮಾರ್ಗ' ಎಂಬ ನಾಣ್ಣುಡಿ ಕೂಡ ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡದ್ದು.

ಮನುಷ್ಯನಲ್ಲಿ ಶ್ರದ್ಧೆ ಒಂದು ಶಕ್ತಿಯಾಗಿ ಅಂಕುರಿಸಲು ಅದಕ್ಕೆ ತಕ್ಕ ಶಿಕ್ಷಣದ ಅಗತ್ಯವಿದೆ. ಬಾಲ್ಯದಿಂದಲೇ ಅದನ್ನು ಬೋಧಿಸುವ ಅಗತ್ಯವಿದೆ ಅನ್ನಿಸುತ್ತದೆ. ಓದಿನಲ್ಲಿ ಶ್ರದ್ಧೆ ಮೂಡಬೇಕಾದರೆ ಅದಕ್ಕೆ ತಕ್ಕ ಪರಿಸರ ಸೃಷ್ಟಿಯಾಗಬೇಕಾಗುತ್ತದೆ. ವ್ಯಕ್ತಿ–ವ್ಯಕ್ತಿಯಲ್ಲಿ ಶ್ರದ್ಧೆಯ ವ್ಯತ್ಯಾಸ ಕಂಡುಬರಲು, ಪರಿಸರದಲ್ಲಿ ಉಂಟಾದ ವ್ಯತ್ಯಾಸವೇ ಕಾರಣ ಎಂಬುದರಲ್ಲಿ ಅನುಮಾನವಿಲ್ಲ.

"ಒಬ್ಬ ಮನುಷ್ಯ ಮತ್ತು ಇನ್ನೊಬ್ಬ ಮನುಷ್ಯನ ನಡುವೆ ಇರುವ ವ್ಯತ್ಯಾಸಕ್ಕೆ ಕಾರಣ ಶ್ರದ್ಧೆಯಲ್ಲದೆ ಇನ್ನೇನೂ ಅಲ್ಲ. ಒಬ್ಬ ಮನುಷ್ಯನನ್ನು ಮಹಾನ್ ವ್ಯಕ್ತಿಯನ್ನಾಗಿ, ಮತ್ತೊಬ್ಬ ವ್ಯಕ್ತಿಯನ್ನು ದುರ್ಬಲ ಮತ್ತು ಹೀನನನ್ನಾಗಿ ಮಾಡುವುದೂ ಈ ಶ್ರದ್ಧೆಯೇ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.